**ಓ.ಎಸ್. ನಂಬರಃ 16/2018**

**ಪಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 26/07/2024 )**

**ಮುಂದುವರೆದ ಪಾಟೀ ಸವಾಲು : 1(ಬಿ) ಪ್ರತಿವಾದಿ ಪರ ಶ್ರೀ ಎಂ ಜಿ ವಕೀಲರಿಂದ,**

ದಾವಾ ಪರಿಶಿಷ್ಟದಲ್ಲಿ ಕಾಣಿಸಿದ ಕ್ಷೇತ್ರಕ್ಕೆ ಪ್ರತ್ಯೇಕ ಸರ್ವೇ ನಕ್ಷೆ ಇರುತ್ತದೆ. ಸದ್ರಿ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಏನು ತೊಂದರೆ ಇಲ್ಲ. ರಾಷ್ಟ್ರೀಯ ಹೆದ್ದಾರಿ 66 ಕ್ಕೆ ದಾವಾ ಕ್ಷೇತ್ರದ ಒಂದು ಗುಂಟೆ ಜಮೀನಿನ ಚತುರ್ಗಡಿ ಹೇಳಬಹುದು. ಪೂರ್ವಕ್ಕೆ ರಾಷ್ಟ್ರೀಯ ಹೆದ್ದಾರಿ 66, ಪಶ್ಚಿಮಕ್ಕೆ ರೈತರ ಜಮೀನು ಅಂದರೆ ಮಹಾದೇವ ಮಂಜಪ್ಪ ನಾಯ್ಕ ಮತ್ತು ಇತರರ ಜಮೀನು, ದಕ್ಷಿಣಕ್ಕೆ ಅರಣ್ಯ ಸರ್ವೆ ನಂಬರ 395 ಇರುತ್ತದೆ ಹಾಗೂ ಉತ್ತರಕ್ಕೆ ರೈತರ ಜಮೀನು ಇರುತ್ತದೆ ಅದು ಯಾರದು ಎಂದು ಗೊತ್ತಿಲ್ಲ.

2. ದಾವಾ ಆಸ್ತಿಗೆ ನಾನು ಪ್ರತಿದಿನ ಹೋಗಿ ಬಂದು ಮಾಡುತ್ತೇನೆ. ಸಾಕ್ಷಿಗೆ ಆರು ಫೋಟೊಗಳನ್ನು ತೋರಿಸಿ ಅದು ದಾವಾ ಆಸ್ತಿಯ ಫೋಟೊಗಳು ಎಂದು ಕೇಳಿದ ಪ್ರಶ್ನೆಗೆ

ಸಾಕ್ಷಿಯು ಸದ್ರಿ ಫೋಟೊಗಳನ್ನು ನೋಡಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಅವುಗಳನ್ನು ನಿಡಿ–1 ರಿಂದ 6 ಎಂದು ಗುರುತಿಸಲಾಯಿತು. ನಿಡಿ–1 ರಿಂದ 6 ಫೋಟೊಗಳಲ್ಲಿ ಕಂಡುಬರುವ ಮನೆ ಮತ್ತು ಜಮೀನು ಮೃತ 1 ಪ್ರತಿವಾದಿಯದು ಎಂದರೆ ಸರಿಯಲ್ಲ. ಅದು ವಾದಿಯದಾಗಿರುತ್ತದೆ. ನಿಡಿ–1 ರಿಂದ 6 ಫೋಟೊಗಳಲ್ಲಿ ಕಂಡುಬರುವ ಮನೆ ಒಂದೇ ಮನೆಯ ಫೊಟೊಗಳಾಗಿರುತ್ತವೆ ಎಂದರೆ ಸರಿ. ಸದ್ರಿ ಮನೆ ವಾದಿ ಜಮೀನು ಖರೀದಿ ಮಾಡುವ ಪೂರ್ವದಲ್ಲಿ ಇತ್ತು. ನಾನು ಹೇಳಿದಂತೆ ನಿಡಿ–1 ರಿಂದ 6 ಫೋಟೊಗಳಲ್ಲಿ ಕಂಡುಬರುವ ಮನೆ ವಾದಿಯ ಹೆಸರಿಗೆ ಯಾವಾಗ ವರ್ಗಾವಣೆ ಆಗಿದೆ ಎಂದು ಈಗ ನನಗೆ ನೆನಪಿಲ್ಲ. ಜಮೀನು ಖರೀದಿ ಮಾಡಿದ ಒಂದು ವರ್ಷದ ಒಳಗೆ ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ವಾದಿ 2005 ನೇ ಇಸವಿಯಲ್ಲಿ ಜಮೀನು ಖರೀದಿ ಮಾಡಿರುತ್ತೇನೆ. ವಾದಿ ಹೆಸರಿಗೆ ನಿಡಿ–1 ರಲ್ಲಿ ಕಂಡುಬರುವ ಮನೆ ವರ್ಗಾವಣೆಯಾಗುವ ಪೂರ್ವದಲ್ಲಿ ಯಾರ ಹೆಸರಿಗೆ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಯಾರ ಹೆಸರಿಗೂ ಇರಲಿಲ್ಲ ಎಂದು ಉತ್ತರಿಸಿರುತ್ತಾರೆ. ಸದ್ರಿ ಮನೆಯ ನಂಬರ ಯಾವುದು ಎಂಬ ಪ್ರಶ್ನೆಗೆ ಸಾಕ್ಷಿಯು ಆ ಬಗ್ಗೆ ನಾನು ವಿಚಾರ ಮಾಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. 2005 ರಿಂದ ಇವತ್ತಿನವರೆಗೆ ಸದ್ರಿ ಮನೆಯ ತೆರಿಗೆಯನ್ನು ವಾದಿಯೇ ಪಾವತಿಸಿರುತ್ತೇನೆ. 2005 ನೇ ಇಸವಿಯಲ್ಲಿ ವಾದಿ ಎಷ್ಟು ಮನೆ ತೆರಿಗೆ ಪಾವತಿ ಮಾಡಿದ್ದಾರೆಂದು ನೆನಪಿಲ್ಲ. ಈ ವರ್ಷ ಎಷ್ಟು ಮನೆ ತೆರಿಗೆ ಪಾವತಿ ಮಾಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಇನ್ನೂ ಕಟ್ಟಬೇಕು ಎಂದು ಉತ್ತರಿಸಿರುತ್ತಾರೆ. 2023 ನೇ ಸಾಲಿನಲ್ಲಿ ಎಷ್ಟು ಮನೆ ತೆರಿಗೆ ಪಾವತಿ ಮಾಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಈ ಮೇಲೆ ಹೇಳಿದಂತೆ ಮನೆ ತೆರಿಗೆ ಪಾವತಿ ಮಾಡಿದ ಬಾಬ್ತು ರಶೀದಿಯ ನಕಲು ಬೆಳಕೆ ಗ್ರಾಮ ಪಂಚಾಯತಿಯಲ್ಲಿ ಲಭ್ಯವಿರುತ್ತದೆ ಎಂದರೆ ಸರಿ. ಹಾಗೆ ನಿಡಿ–1 ರಲ್ಲಿ ಕಂಡುಬರುವ ಮನೆಯ ತೆರಿಗೆ ಪಾವತಿ ಮಾಡಿದ ಬಾಬ್ತು ರಶೀದಿಗಳ ಧೃಡಿಕೃತ ನಕಲನ್ನು ಬೆಳಕೆ ಗ್ರಾಮ ಪಂಚಾಯತಿಯಿಂದ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಅದೇ ರೀತಿ ವಾದಿ ಮನೆ ತೆರಿಗೆ ಪಾವತಿ ಮಾಡಿದ ಬಾಬ್ತು ಅವರ ಬಳಿ ರಶೀದಿಗಳು ಇರುತ್ತವೆ. ಸದ್ರಿ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಿಡಿ–1 ರಲ್ಲಿ ಕಂಡುಬರುವ ಮನೆಯಲ್ಲಿ ಒಟ್ಟು ಮೂರು ಕೊಠಡಿಗಳು ಇದ್ದು, ಒಂದು ಹಾಲ್, ಒಂದು ಅಡುಗೆ ಕೋಣೆ ಇರುತ್ತದೆ. ಸದ್ರಿ ಮನೆಯ ಕೊಠಡಿಗಳ ಅಳತೆ ಹೇಳಲು ತುಂಬಾ

ವರ್ಷಗಳಾಗಿರುವುದರಿಂದ ಆಗುವುದಿಲ್ಲ. ಸದ್ರಿ ಮನೆಯ ಒಟ್ಟು ಸುತ್ತಳತೆಯನ್ನು ಹೇಳಲು ನನಗೆ ಆಗುವುದಿಲ್ಲ. ನಾನು ಹೇಳುವಂತಹ ದಾವಾ ಸ್ವತ್ತಿನ ಖರೀದಿ ಪತ್ರದಲ್ಲಿ ನಿಡಿ-1 ಫೋಟೊದಲ್ಲಿ ಕಂಡುಬರುವ ಮನೆಯ ಬಗ್ಗೆ ನಮೂದು ಮಾಡಿರುತ್ತೇವೆ. ಸದ್ರಿ ಮನೆಗೆ ಕ್ರಯಪತ್ರದಲ್ಲಿ ಎರಡು ಲಕ್ಷ ಮೌಲ್ಯ ತೋರಿಸಿರುತ್ತೇವೆ. ಅದಕ್ಕೆ ಸಂಬಂಧಿಸಿದಂತೆ ಮುದ್ರಾಂಕ ಶುಲ್ಕವನ್ನು ಪಾವತಿ ಮಾಡಿರುತ್ತೇನೆ. ಆ ರೀತಿ ಮುದ್ರಾಂಕ ಶುಲ್ಕ ಪಾವತಿ ಮಾಡಿದ ಬಗ್ಗೆ ನನ್ನ ಬಳಿ ದಾಖಲೆ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನು ತೊಂದರೆ ಇಲ್ಲ. ನಿಡಿ-1 ಫೋಟೊದಲ್ಲಿ ಕಂಡುಬರುವ ಮನೆ 2001 ರಿಂದ ಇಲ್ಲಿಯವರೆಗೆ ಮೃತ 1 ನೇ ಪ್ರತಿವಾದಿಯವರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಸದ್ರಿ ಮನೆಯ ಸಂಖ್ಯೆ324 ಆಗಿರುತ್ತದೆ ಎಂದರೆ ಸುಳ್ಳು.

**ಮಧ್ಯಾಹ್ನದ ವಿರಾಮದ ಸಮಯವಾಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು 2.45 ಕ್ಕೆ ಮುಂದೂಡಲಾಗಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**

**ಓ.ಎಸ್. ನಂಬರಃ 16/2018**

**ಪಿ. ಡಬ್ಲ್ಯೂಃ 1**

**(ಇಂದು ತಾಃ 26-07-2024 ರಂದು ವಿರಾಮದ ನಂತರ ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

<u>**ಮುಂದುವರೆದ ಪಾಟೀ ಸವಾಲು : 1(ಬಿ) ಪ್ರತಿವಾದಿ ಪರ ಶ್ರೀ ಎಂ ಜಿ ವಕೀಲರಿಂದ,**</u>

ವಾದ ಪತ್ರದಲ್ಲಿ ನಿಡಿ–1 ರಲ್ಲಿ ಇರುವ ದಾವಾ ಸ್ವತ್ತಿನಲ್ಲಿರುವ ಮನೆಯ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯಲ್ಲಿರುವ ಪ್ರಮಾಣ ಪತ್ರದಲ್ಲಿಯೂ ಸಹ ಸದ್ರಿ ಮನೆಯ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸದ್ರಿ ಮನೆಯ



ಬಗ್ಗೆ ನಮೂದು ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ವಾದ ಪತ್ರದಲ್ಲಿ ಪ್ರತಿವಾದಿಗಳು ಅರ್ಧಂಬರ್ಧ ಕಟ್ಟಡವನ್ನು ಕಟ್ಟಲು ತಯಾರಿ ಮಾಡುತ್ತಿದ್ದಾರೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಮೃತ 1 ನೇ ಪ್ರತಿವಾದಿಯು ವಾದಿಯ ಜಾಗದಲ್ಲಿ ಕಟ್ಟಡ ಕಟ್ಟಲು ಬಂದಿರುವುದಿಲ್ಲ. ಆ ರೀತಿ ನಮೂದು ಮಾಡಿದ್ದರೆ ಅದು ಸುಳ್ಳಾಗಿರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಮೃತ 1 ನೇ ಪ್ರತಿವಾದಿಯವರು ಯಾವ ರೀತಿಯಲ್ಲಿ ಆತಂಕ ಪಡಿಸಿದರು ಎಂಬ ಪ್ರಶ್ನೆಗೆ ಸಾಕ್ಷಿಯು ದಾವಾ ಆಸ್ತಿಯಲ್ಲಿ ಕಟ್ಟಡ ಕಟ್ಟಲು ಕಲ್ಲು ತಂದು ಹಾಕಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆ ರೀತಿ ಒಂದು ಲೋಡ್ ಕಲ್ಲು ತಂದು ಹಾಕಿದ್ದರು. ಆ ರೀತಿ ಕಲ್ಲು ತಂದು ಹಾಕಿರುವ ಫೋಟೊ ತೆಗೆದಿರುವುದಿಲ್ಲ.

2. ದಾವಾ ಆಸ್ತಿಯಲ್ಲಿ 16 ಗುಂಟೆ 5 ಅಣೆ ಕ್ಷೇತ್ರವನ್ನು ಮೃತ 1 ನೇ ಪ್ರತಿವಾದಿಯವರು ವೈವಾಟಿ ಮಾಡಿಕೊಂಡು ಬಂದಿದ್ದರು ಎಂದರೆ ಸುಳ್ಳು. ನಿಡಿ–1 ಫೋಟೊದಲ್ಲಿರುವ ಮನೆಯನ್ನು ದಿನಾಂಕ 01.02.1992 ರಲ್ಲಿ ಮೃತ 1 ನೇ ಪ್ರತಿವಾದಿಯವರು ನಿರ್ಮಿಸಿರುತ್ತಾರೆ ಎಂದರೆ ಸುಳ್ಳು. 1992 ನೇ ಇಸವಿಯಲ್ಲಿ ಸದ್ರಿ ಮನೆಗೆ ಬೆಳಕೆ ಗ್ರಾಮ ಪಂಚಾಯತಿಯವರು ಮನೆ ನಂಬರ 7 ಎಂದು ನೀಡಿದ್ದರು ಎಂದರೆ ಸುಳ್ಳು. ತದನಂತರ 2001 ನೇ ಇಸವಿಯಲ್ಲಿ ಸದ್ರಿ ಮನೆಯ ಇನ್ನೊಂದು ಭಾಗಕ್ಕೆ 324 ಎಂದು ನಂಬರನ್ನು ಬೆಳಕೆ ಗ್ರಾಮ ಪಂಚಾಯತಿಯರು ನೀಡಿದ್ದರು ಎಂದರೆ ಸುಳ್ಳು. ಹಾಗೆ ಸದ್ರಿ ಮನೆಯನ್ನು ಮೃತ 1 ನೇ ಪ್ರತಿವಾದಿಯವರು ಕಟ್ಟಿರುವ ಬಗ್ಗೆ ಸದ್ರಿ ಜಾಗದ ಹಿಂದಿನ ಮಾಲೀಕರಿಗೂ ಗೊತ್ತಿತ್ತು ಎಂದರೆ ಸುಳ್ಳು. ಆ ಬಗ್ಗೆ ವಾದಿಗೂ ಕೂಡ ಗೊತ್ತಿತ್ತು ಎಂದರೆ ಸುಳ್ಳು. ಆ ಬಗ್ಗೆ ವಾದಿಯವರು ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ವಾದ ಪತ್ರದಲ್ಲಿ ಹೇಳಿರುವಂತೆ ಮೃತ 1 ನೇ ಪ್ರತಿವಾದಿಯವರು ಯಾವುದೇ ರೀತಿಯಲ್ಲಿ ಹೊಸದಾಗಿ ಕಟ್ಟಡ ನಿರ್ಮಾಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಕಾಣಿಸಿರುವಂತಹ ವಾದ ಕಾರಣವು ಈ ದಾವೆಗಾಗಿ ಸೃಷ್ಠಿ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 16 ಗುಂಟೆ 5 ಅಣೆ ಕ್ಷೇತ್ರವನ್ನು ಮತ್ತು ಅದರಲ್ಲಿರುವ ನಿಡಿ–1 ಫೋಟೊದಲ್ಲಿ ಕಾಣುವ ಮನೆಯನ್ನು ಮೃತ 1 ನೇ

ಪ್ರತಿವಾದಿಯವರು  ಮತ್ತು ಅವರ ಕುಟುಂಬದವರು ವೈವಾಟಿ ಮಾಡಿಕೊಂಡು ಬಂದಿದ್ದರಿಂದ ಅವರ ವಿರುದ್ಧ ಖಾಯಂ ಪ್ರತಿಬಂಧಕಾಜ್ಞೆ



ದಾವೆ ನಿಲ್ಲತಕ್ಕದ್ದಲ್ಲ ಎಂದರೆ ಸುಳ್ಳು.  ದಾವಾ ಆಸ್ತಿಯಲ್ಲಿ 16 ಗುಂಟೆ 5 ಅಣೆ ಕ್ಷೇತ್ರ ಮತ್ತು ಅದರಲ್ಲಿರುವ ಮನೆಯಲ್ಲಿ  ಮೃತ 1 ನೇ ಪ್ರತಿವಾದಿಯವರು ಮತ್ತು ಅವರ ಕುಟುಂಬದವರು ಕಬ್ಜಾ ವೈವಾಟಿಯಲ್ಲಿರುವರಿಂದ ನಾನು ಹೇಳುವಂತಹ ದಾವಾ ಸ್ವತ್ತಿನ  ಖರೀದಿ ದಸ್ತಾವೇಜು ಕಾನೂನುಬಾಹೀರ ಎಂದರೆ ಸರಿಯಲ್ಲ.  ಅದೇ ರೀತಿ ವಾದಿಯವರು ಕಾನೂನುಬದ್ಧ ಮಾಲೀಕತ್ವ ಹೊಂದಿರುವುದಿಲ್ಲ ಎಂದರೆ ಸುಳ್ಳು.

**ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ.**

**ಹೆಚ್ಚುವರಿ  ಸಿವಿಲ್ ಜಡ್ಜ, ಭಟ್ಕಳ**